# ಕರ್ನಾಟಕ ವಿಧಾನ ಪರಿಷತ್ತು

ಐಟಿಬಿಟಿ 403 ಎಸ್ ಟಿಎಸ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 555 |
| ಸದಸ್ಯರ ಹೆಸರು | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 11.12.2025 |
| ಉತ್ತರಿಸಬೇಕಾದ ಸಚಿವರು | ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರಿನ ಪಿಲಿಕುಳ ನಿಸರ್ಗ ಧಾಮವನ್ನು ಅಭಿವೃದ್ದಿಪಡಿಸಲು ಇಲ್ಲಿಯವರೆಗೆ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಸಭೆಗಳಲ್ಲಿ ಚರ್ಚಿಸಿ ಸರ್ಕಾರದ ಗಮನಕ್ಕೆ ತಂದಿದ್ದ ಯಾವ ಯಾವ ಅಂಶಗಳ ಬಗ್ಗೆ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗಿದೆ; ಉಳಿದ ಅಗತ್ಯ ಕ್ರಮಗಳನ್ನು ಯಾವ ಕಾಲ ಮಿತಿಯಲ್ಲಿ ಪೂರ್ಣ ಗೊಳಿಸಲಾಗುವುದು: | ಮಂಗಳೂರಿನ ಪಿಲಿಕುಳ ನಿಸರ್ಗಧಾಮವನ್ನು ಅಭಿವೃದ್ದಿಪಡಿಸಲು ಇಲ್ಲಿಯವರೆಗೆ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಸಭೆಗಳಲ್ಲಿ ಚರ್ಚಿಸಿ ಸರ್ಕಾರದ ಗಮನಕ್ಕೆ ತಂದಿದ್ದ ಈ ಕೆಳಕಾಣಿಸಿದ ಅಂಶಗಳ ಬಗ್ಗೆ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲು ಕ್ರಮವಹಿಸಲಾಗಿದೆ.<br><br>1. ಪಶ್ಚಿಮ ಘಟ್ಟ ಸಂಶೋಧನಾ ಕೇಂದ್ರ ಯೋಜನೆ ಬಗ್ಗೆ ಈ ಹಿಂದೆ ತಯಾರಿಸಿದ ರೂ.550.00 ಲಕ್ಷದ ಯೋಜನಾ ಪ್ರಸ್ತಾವನೆಯು ಪ್ರಸ್ತುತ ಪರಿಷ್ಕೃತಗೊಳಿಸುವ ಹಂತದಲ್ಲಿದೆ.<br><br>2. ಪ್ರಾದೇಶಿಕ ವಿಜ್ಞಾನ ಕೇಂದ್ರದ ಉನ್ನತೀಕರಣ: ಪ್ರೊ.ಯು.ಆರ್.ರಾವ್ ಖಗೋಳಶಾಸ್ತ್ರ ಮತ್ತು ಬಾಹ್ಯಾಕಾಶ ಗ್ಯಾಲರಿಯ ನಿರ್ಮಾಣದ ಬಗ್ಗೆ MRPL ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಲಾಗಿದ್ದು ಸದರಿ ಸಂಸ್ಥೆಯ CSR ನಿಧಿಯಿಂದ VITM ಮುಖಾಂತರ ಅನುಷ್ಠಾನದ ಹಂತದಲ್ಲಿದೆ.<br><br>3. ತಾರಾಲಯಕ್ಕೆ ಲೇಸರ್ ಪ್ರೊಜೆಕ್ಟರ್ ಅಳವಡಿಕೆ : ಈ ಬಗ್ಗೆ ಕಾರ್ಪೋರೇಟ್ ಸಂಸ್ಥೆಗಳ CSR ನಿಧಿಯಿಂದ ಅನುದಾನ ಪಡೆದು ಅನುಷ್ಠಾನಗೊಳಿಸಬೇಕಾಗಿದೆ. |
| ಆ) | ಪ್ರಾಧಿಕಾರದ ಅಧಿಕಾರಿಗಳು ಹೆಚ್ಚುವರಿ ಪ್ರಭಾರಿ ನೆಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಪೂರ್ಣಕಾಲಿಕ ಅಧಿಕಾರಿಗಳನ್ನು ನೇಮಿಸುವ ಬಗ್ಗೆ ಮತ್ತು ಅಧಿಕಾರೇತರ ಅಧ್ಯಕ್ಷರನ್ನು ನೇಮಿಸುವ ಬಗ್ಗೆ ಸರಕಾರ ಕೈಗೊಂಡ ಕ್ರಮಗಳೇನು: ವಾರ್ಷಿಕವಾಗಿ ಸರ್ಕಾರ ನೀಡುವ ಅನುದಾನ ಮತ್ತು ಸಂಗ್ರಹವಾಗುವ ಸ್ವಂತ ಸಂಪನ್ಮೂಲ ಎಷ್ಟು: ಒಟ್ಟು ನಿರ್ವಹಣಾ ವೆಚ್ಚದಲ್ಲಿ ಕೊರತೆಯಾಗುವ ಮೊತ್ತವೆಷ್ಟು: | ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರಕ್ಕೆ ಸರ್ಕಾರದ ಆದೇಶ ಸಂಖ್ಯೆ:ಐಟಿಬಿಟಿ 95 ಎಸ್‌ಟಿಎಸ್ 2023, ದಿನಾಂಕ:21.10.2024 ರನ್ವಯ ಆಯುಕ್ತರ ಹುದ್ದೆಯನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ:ಐಟಿಬಿಟಿ 95 ಎಸ್‌ಟಿಎಸ್ 2023, ದಿನಾಂಕ:12.09.2024 ರನ್ವಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ತತ್ಸಮಾನ ವೃಂದದ ನಿರ್ದೇಶಕರು(ಜೈವಿಕ ಉದ್ಯಾನವನ) ಹುದ್ದೆಗಳನ್ನು ಸೃಜಿಸಿ ನಿಯೋಜನೆ ಮೇಲೆ ಭರ್ತಿ ಮಾಡಲು ಆದೇಶಿಸಲಾಗಿದೆ.<br><br>ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ-2018 ರನ್ವಯ ರಾಜ್ಯ ಮಟ್ಟದ ಸಲಹಾ ಸಮಿತಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಸಚಿವರು ಹಾಗೂ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಜಿಲ್ಲಾ ಸಮಿತಿಗೆ ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ಇವರು ಕ್ರಮವಾಗಿ ಅಧ್ಯಕ್ಷರಾಗಿರುತ್ತಾರೆ.<br><br>ವಾರ್ಷಿಕವಾಗಿ ಸರ್ಕಾರ ನೀಡುವ ಅನುದಾನ ಮತ್ತು ಸಂಗ್ರಹವಾಗುವ ಸ್ವಂತ ಸಂಪನ್ಮೂಲದ ವಿವರ:<br><br>(ರೂ ಲಕ್ಷಗಳಲ್ಲಿ) |

| ವರ್ಷ | ಮಂಜೂರಾಗಿರುವ ಸರ್ಕಾರದ ಅನುದಾನ | ಸ್ವಂತ ಸಂಪನ್ಮೂಲ | ಕೊರತೆ |
|---|---|---|---|
| 2021-22 | 232.00 | 206.48 | - |

| | | | |
|---|---|---|---|
| 2022-23 | 496.16 | 515.27 | - |
| 2023-24 | 570.00 | 541.46 | 114.30 |
| 2024-25 | 720.46 | 452.40 | - |

| | | |
|---|---|---|
| ಇ) | ಪಿಲಿಕುಳ ನಿಸರ್ಗಧಾಮಕ್ಕೆ ಯಾವ ಅವಧಿಯಲ್ಲಿ ಎಷ್ಟು ಸಿಬ್ಬಂದಿಗಳ ನೇಮಕ ಅಥವಾ ಹೊಂದಾಣಿಕೆಯನ್ನು ಯಾವ ನಿಯಮಗಳಡಿ ಮಾಡಲಾಗಿದೆ; ಎಷ್ಟು ವಿಧದ ಸಿಬ್ಬಂದಿಗಳು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ; | ಹಿಂದಿನ ಪಿಲಿಕುಳ ನಿಸರ್ಗಧಾಮ ಸೊಸೈಟಿಯಲ್ಲಿ 1997 ರಿಂದ 2018 ರವರೆಗೆ ಒಟ್ಟು 166 (ಗುತ್ತಿಗೆ, ನಿರಂತರ ಮತ್ತು ಹೊರಗುತ್ತಿಗೆ) ಸಿಬ್ಬಂದಿಗಳನ್ನು ಸೊಸೈಟಿಯ ಮೆಮೊರಾಂಡಮ್ ಆಫ್ ಅಸೋಶಿಯೇಶನ್ ನಿಯಮಾವಳಿಗಳ ಪ್ರಕಾರ ನೇಮಕ ಮಾಡಲಾಗಿದೆ.<br>ಪ್ರಸ್ತುತ ಪ್ರಾಧಿಕಾರದಲ್ಲಿ ಈ ಕೆಳಕಾಣಿಸಿದ ಅಧಿಕಾರಿ/ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.<br>1. ಪ್ರಭಾರದಲ್ಲಿರುವ ಅಧಿಕಾರಿಗಳು – 5<br>2. ಖಾಯಂ ಸಿಬ್ಬಂದಿಗಳು – 7<br>3. ನಿರಂತರ ಸಿಬ್ಬಂದಿಗಳು-42<br>4. ಗುತ್ತಿಗೆ ಸಿಬ್ಬಂದಿಗಳು-8<br>5. ಹೊರಗುತ್ತಿಗೆ ಸಿಬ್ಬಂದಿಗಳು-132 |
| ಈ) | ಪ್ರಸ್ತುತ ಈ ಸಿಬ್ಬಂದಿಗಳೇ ಸೂಕ್ತ ವೃಂದ ಮತ್ತು ನೇಮಕಾತಿ ನಿಯಮಗಳ ಮೂಲಕ ವೇತನ, ವೇತನ ಭಡ್ತಿ, ಇತರ ಸವಲತ್ತುಗಳನ್ನು ನೀಡಲು ಕ್ರಮ ವಹಿಸಲಾಗಿದೆಯೇ ಎಷ್ಟು ವರ್ಷಗಳಿಂದ ಸದರಿ ಸಿಬ್ಬಂದಿಗಳಿಗೆ ಈ ಸವಲತ್ತುಗಳನ್ನು ನೀಡಲು ಬಾಕಿಯಿದೆ; ಯಾವಾಗ ನೀಡಲಾಗುವುದು; | ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ವೃಂದ ಮತ್ತು ನೇಮಕಾತಿ ನಿಯಮಗಳು ರಚನೆಯಾಗದಿರುವ ಹಿನ್ನೆಲೆಯಲ್ಲಿ ಪ್ರಸ್ತುತ ಈ ಸಿಬ್ಬಂದಿಗಳಿಗೆ ವಾರ್ಷಿಕ ವೇತನ ಹೆಚ್ಚಳ/ ಮಧ್ಯಂತರ ಪರಿಹಾರ ಭತ್ಯೆ ಇತ್ಯಾದಿಗಳನ್ನು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಜಿಲ್ಲಾ ಸಮಿತಿ ಸಭೆಯ ಅನುಮೋದನೆಯೊಂದಿಗೆ ನೀಡಲಾಗುತ್ತಿದೆ.<br>ಪ್ರಸ್ತುತ ಸಾಲಿನಲ್ಲಿ ನೀಡಬೇಕಾದ ವಾರ್ಷಿಕ ವೇತನ ಹೆಚ್ಚಳದ ಕುರಿತು ಪ್ರಾಧಿಕಾರದ ಸಭೆಯ ನಿರ್ಣಯದಂತೆ ಕ್ರಮವಹಿಸಲಾಗುವುದು. |
| ಉ) | ಸದರಿ ಸಿಬ್ಬಂದಿಗಳಿಗೆ ವಾರ್ಷಿಕ ವೇತನ ಭಡ್ತಿ ನೀಡುತ್ತಿದ್ದು ಪ್ರಸ್ತುತ ಸಾಲಿನಲ್ಲಿ ನೀಡದಿರಲು ಕಾರಣಗಳೇನು ಈ ಕುರಿತು ನಿಯಮಗಳಾವುವು; ವಾರ್ಷಿಕವಾಗಿ ಅದರ ಹೊರೆಯೆಷ್ಟು; ಅದನ್ನು ಯಾವಾಗ ನೀಡಲು ಕ್ರಮವಹಿಸಲಾಗುವುದು? | ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರವು ಪ್ರಾರಂಭವಾದ ಬಳಿಕ ಪ್ರಸ್ತುತದವರೆಗೆ ಸಿಬ್ಬಂದಿಗಳಿಗೆ ವೇತನಕ್ಕೆ ಸಂಬಂಧಪಟ್ಟಂತೆ ವಾರ್ಷಿಕ ವೇತನ ಹೆಚ್ಚಳ, ಮಧ್ಯಂತರ ಪರಿಹಾರ ಭತ್ಯೆ ಇತ್ಯಾದಿಗಳನ್ನು ಜಿಲ್ಲಾ ಮಟ್ಟದ ಪ್ರಾಧಿಕಾರದ ಸಭೆಯ ಅನುಮೋದನೆಯೊಂದಿಗೆ ನೀಡಲಾಗುತ್ತಿದೆ.<br>ವಾರ್ಷಿಕವಾಗಿ ಪ್ರಾಧಿಕಾರಕ್ಕೆ ರೂ.4,50,090/- ಹೊರೆಯಾಗುತ್ತದೆ. ಪ್ರಸ್ತುತ ಸಾಲಿನಲ್ಲಿ ನೀಡಬೇಕಾದ ವಾರ್ಷಿಕ ವೇತನ ಹೆಚ್ಚಳ, ಇತ್ಯಾದಿಗಳನ್ನು ನೀಡುವ ಬಗ್ಗೆ ಪ್ರಾಧಿಕಾರದ ಸಭೆಯ ನಿರ್ಣಯದಂತೆ ಕ್ರಮವಹಿಸಲಾಗುವುದು. |

**2025**

**(ಎನ್.ಎಸ್.ಭೋಸರಾಜು)**
ಮಾನ್ಯ ಸಣ್ಣ ನೀರಾವರಿ ಹಾಗೂ
ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.